# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತಿ.ನರಸೀಪುರ

## ಒ ಎಸ್ ನಂ.231/2020

| | | | | |
|---|---|---|---|---|
| 01 | ಹೆಸರು | ಶ್ರೀ ಕೆ ಸತೀಶ್ | ಡಿ ಡಬ್ಲ್ಯೂ | **2** |
| 02 | ತಂದೆಯ ಹೆಸರು | ಕರಿಗೌಡ | | |
| 03 | ವಯಸ್ಸು | 50 | | |
| 04 | ಉದ್ಯೋಗ | ಮುಖ್ಯಾಧಿಕಾರಿಗಳು | | |
| 05 | ಊರು | ಬನ್ನೂರು | | |

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 09.03.2026 ರಂದು ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ 2 ನೇ ಪ್ರತಿವಾದಿ ಪರ ಶ್ರೀ.ಪಿ ಎನ್ ಕೆ ವಕೀಲರಿಂದಃ**

ನಾನು ದಿಃ11.02.2026 ರಿಂದ ಇಲ್ಲಿಯವರೆಗೂ ಬನ್ನೂರಿನ ಪುರಸಭೆಯಲ್ಲಿ ಮುಖ್ಯಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ನ್ಯಾಯಾಲಯದಿಂದ ಸಮನ್ಸ್ ಬಂದ ಮೇರೆಗೆ ನಾನು ಈ ಪ್ರಕರಣದಲ್ಲಿ ದಾಖಲೆಯನ್ನು ಹಾಜರು ಪಡಿಸಲು ಹಾಜರಾಗಿರುತ್ತೇನೆ.

ನಾನು 1976–77 ನೇ ಸಾಲಿನ ಮತ್ತು 1998–99 ರ ಸಾಲಿನ ಅಸೆಸ್ ಮೆಂಟ್ ಲೆಡ್ಜರ್ ನ ಎಕ್ಸಟ್ರಾಕ್ಟ್ ನ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸುತ್ತಿದ್ದೇನೆ . ಸದರಿ ದಾಖಲೆಗಳನ್ನು **ನಿ ಡಿ 38 ಮತ್ತು 39** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ಶ್ರೀ ಹೆಚ್ ಎನ್ ಬಿ ಎನ್ ವಕೀಲರಿಂದಃ**

ನಿ ಡಿ **38** ಮತ್ತು **39** ರ ದಾಖಲೆಗಳು ಅಸೆಸ್ ಮೆಂಟ್ ಲೆಡ್ಜರ್ ನ ಎಕ್ಸಟ್ರಾಕ್ಟ್ ಇರುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಯಾವುದೇ ಆಸ್ತಿಯ ಕ್ರಮ ಸಂಖ್ಯೆ ಕಾಲದಿಂದ ಕಾಲಕ್ಕೆ ಬದಲಾವಣೆ ಆಗುತ್ತದೆ ಎಂದರೆ ಸಾಕ್ಷಿಯು 5 ವರ್ಷಗಳಿಗೊಮ್ಮೆ ಬದಲಾವಣೆ ಆಗುತ್ತದೆ ಎಂದು ನುಡಿಯುತ್ತಾರೆ. ನಿ ಡಿ 38 ರ ದಾಖಲೆಯಂತೆ ಸದರಿ ಸ್ವತ್ತಿನ ವಿಸ್ತೀರ್ಣವು 26x40 ಅಡಿ ಇರುತ್ತದೆ. ಸದರಿ ವಿಸ್ತೀರ್ಣವು ಸದರಿ ಸ್ವತ್ತಿನ ಸಂಪೂರ್ಣ ಅಳತೆ ಇದ್ದು ಸದರಿ ಸ್ವತ್ತಿನಲ್ಲಿರುವ ಮನೆಯ ಅಳತೆ ನಮೂದು ಇರುವುದಿಲ್ಲ ಎಂದರೆ ಸರಿ.

ನಿ ಡಿ 39 ರ ದಾಖಲೆಯನ್ನು ಹಾಜರುಪಡಿಸುವಂತೆ ನನಗೆ ನ್ಯಾಯಾಲಯದಿಂದ ಸೂಚನೆ ಇರಲಿಲ್ಲ ಎಂದರೆ ಸಾಕ್ಷಿಯು ಲೆಡ್ಜರ್ ಪುಸ್ತಕವನ್ನು ನಾವು 5 ವರ್ಷಕ್ಕೊಮ್ಮೆ ಮತ್ತು 10 ವರ್ಷಗಳಿಗೊಮ್ಮೆ ನಾವು ಹೊಸದಾಗಿ ಬರೆಯುತ್ತೇವೆ ಹಾಗಾಗಿ ನಾನು ನಿ ಡಿ 38 ದಾಖಲೆಗೆ ಪೂರಕವಾಗುವಂತೆ ನಿ ಡಿ 39 ರ ದಾಖಲೆಯನ್ನು ಹಾಜರು ಪಡಿಸಿರುತ್ತೇನೆ ಎಂದು ನುಡಿಯುತ್ತಾರೆ. ನಿ ಡಿ 38 ಮತ್ತು 39 ರಲ್ಲಿ ದಾಖಲಾಗಿರುವ 26x40 ಅಡಿ ಅಳತೆಯನ್ನು ಯಾವ ಆಧಾರದ ಮೇಲೆ ನಮೂದು ಮಾಡಲಾಗಿದೆ ಎಂದು ದಾಖಲಾಗಿಲ್ಲ ಎಂದರೆ ಸರಿ.

ಮರುವಿಚಾರಣೆಃಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿಯಾಗಿದೆ.

(ಸಚಿನ್ ಹೆಚ್ . ಆರ್.)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ತಿ.ನರಸೀಪುರ.